ಕರ್ನಾಟಕ ವಿಧಾನಸಭೆ

(13ನೇ ವಿಧಾನ ಸಭೆ. 2ನೇ ಅಧಿವೇಶನ)

286 ಶ್ರೀ ಗೋಪಾಲ ಭಂಡಾರಿ ಹೆಚ್.(ಕಾರ್ಕಳ)

ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು.

ಅ). ಆಶ್ರಯ ನಿವೇಶನಗಳನ್ನು (ಉಚಿತ ನಿವೇಶನ ಕಳೆದ ನಾಲ್ಕು ವರ್ಷಗಳಿಂದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಯಾವ ವರ್ಷದಲ್ಲಿ ವಿತರಿಸಲಾಗಿದೆ.)

ಕಳೆದ ನಾಲ್ಕು ವರ್ಷಗಳಿಂದ ಅಂದರೆ 2004–05, 2005–06, 2006–07, 2007–08, ಮತ್ತು 2008–09ರಲ್ಲಿ ಈ ಕೆಳಗಿನಂತೆ ನಿವೇಶನಗಳನ್ನು ವಿತರಿಸಲಾಗಿದೆ.

ವರ್ಷ	ಗ್ರಾಮೀಣ ನಿವೇಶನ ಯೋಜನೆ	ನಗರ ನಿವೇಶನ ಯೋಜನೆ
2004–05	4762	2379
2005–06	6814	3160
2006–07	2280	3566
2007–08	1191	2066
2008–09	139	134
ಒಟ್ಟು	15186	11305

ತಾಲ್ಲೂಕುವಾರು, ಪಟ್ಟಣವಾರು ಮತ್ತು ವರ್ಷವಾರು ವಿವರ ಅನುಬಂಧ 1ರಲ್ಲಿ ನೀಡಲಾಗಿದೆ.

(ಪುಟಗಳು ಹೆಚ್ಚು ಇರುವುದರಿಂದ ಮಾನ್ಯ ಸದಸ್ಯರಿಗೆ, ಮಾತ್ರ ನೀಡಲಾಗುವುದು)

ಆ). ನಿವೇಶನ ವಿತರಣೆ ಯಾವಾಗಿನಿಂದ ಪ್ರಾರಂಭಿಸಲಾಗುವುದು;

ನಗರ ಪ್ರದೇಶದಲ್ಲಿ ನಿವೇಶನ ಯೋಜನೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ನಿವೇಶನ ಯೋಜನೆ ಜಾರಿಯಲ್ಲಿದ್ದು, 2010–01ರಿಂದ ಪ್ರತಿ ವರ್ಷ ಗುರಿಯನ್ನು ನಿಗದಿಪಡಿಸಿ ನಿವೇಶನ ಹಂಚಿಕೆ ಮಾಡಲಾಗುತ್ತಿದೆ.

ಇ). ಸರಕಾರಿ ಜಮೀನಿನಲ್ಲಿ ಭೂ ರಹಿತರು ನಿವೇಶನ ರಹಿತ ಬಡವರು ಕೆಲವು ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸ್ತವ್ಯವಿರುವವರಿಗೆ ಆ ಸ್ಥಳ ಮಂಜೂರಾತಿಗೆ ಅವಕಾಶ ಮಾಡಿಕೊಡಲಾಗುವುದೇ;

ಸರ್ಕಾರಿ ಜಮೀನಿನಲ್ಲಿ ಭೂರಹಿತರು ನಿವೇಶನರಹಿತ ಬಡವರು ಮನೆ ಕಟ್ಟಿಕೊಂಡು ವಾಸ್ತವ್ಯವಿರುವವರಿಗೆ ಸ್ಥಳ ಮಂಜೂರಾತಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪರಿಶೀಲಿಸಿ ಕ್ರಮಕೈಗೊಳ್ಳುವರು.

ಈ). ಯಾವ ರೀತಿಯಲ್ಲಿ ಯಾವ ನಮೂನೆಯಲ್ಲಿ ಫಲಾನುಭವಿಗಳು ಅರ್ಜಿ ಸಲ್ಲಿಸಬೇಕು?

ಆಶ್ರಯ ನಿವೇಶನ ಯೋಜನೆಯಡಿ ನಿವೇಶನ ಪಡೆಯಲು ಅರ್ಜಿ ನಮೂನೆ 1–ನ್ನು ಆಯಾ ಸ್ಥಳೀಯ ಸಂಸ್ಥೆಯಿಂದ ಪಡೆದು ತುಂಬಿ ಸಹಿ ಮಾಡಿ ಸ್ಥಳೀಯ ಸಂಸ್ಥೆಗೆ ಸಲ್ಲಿಸಬೇಕು.

ಸಂಖ್ಯೆ: ವಇ 21 ಹೆಚ್ ಎಎಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನಸಭೆ

312 ಶ್ರೀ ಹೆಚ್.ಎಸ್.ಪ್ರಕಾಶ್ (ಹಾಸನ)

ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ ವಸತಿ ಹಾಗೂ ಮುಜರಾಯಿ ಸಚಿವರು.

ಅ) ರಾಜ್ಯ ಗೃಹ ಮಂಡಳಿಯು ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಚೆನ್ನಪಟ್ಟಣ ಗ್ರಾಮದ ಬಳಿ ನಿವೇಶನ ಹಾಗೂ ಮನೆಗಳಿಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದು ನಿಜವೇ; ಹಾಗಿದ್ದಲ್ಲಿ, ವಶಪಡಿಸಿ ಕೊಂಡಿರುವ ಜಮೀನೆಷ್ಟು?

ಹೌದು ನಿಜ.

ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ 153 ಎಕರೆಗಳಾಗಿರುತ್ತದೆ.

ಆ) ಈ ಜಮೀನಿನಲ್ಲಿ ಹಂಚಿಕೆಯನ್ನು ಮಾಡಿರುವ ನಿವೇಶನಗಳೆಷ್ಟು; ಹಾಗೂ ಮನೆಗಳೆಷ್ಟು; ಇದಕ್ಕಾಗಿ ಸಾರ್ವಜನಿಕರಿಂದ ಬಂದ ಅರ್ಜಿಗಳೆಷ್ಟು,

ಸದರಿ ಜಮೀನಿನಲ್ಲಿ ವಸತಿ ಬಡಾವಣೆ ನಿರ್ಮಿಸುತ್ತಿದ್ದು, ಬಡಾವಣೆಯ ವಿನ್ಯಾಸ ನಕ್ಷೆ, ಅಂತಿಮಗೊಳ್ಳುವ ಹಂತದಲ್ಲಿದೆ. ಒಟ್ಟು ಅಂದಾಜು 1600 ನಿವೇಶನಗಳನ್ನು ರಚನೆ ಮಾಡಬಹುದಾಗಿರುತ್ತದೆ. ಈ ಪೈಕಿ 200 ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸುವ ಉದ್ದೇಶವಿದೆ. ಸದರಿ ಬಡಾವಣೆಯ ಬೇಡಿಕೆ ಸಮೀಕ್ಷೆಯ ಪ್ರಕಾರ 6515 ಅರ್ಜಿಗಳು ಬಂದಿದ್ದು.

ಇ) ಸಾರ್ವಜನಿಕರ ನಿರಾಸಕ್ತಿಯಿಂದಾಗಿ ನಿವೇಶನಗಳನ್ನು ಪೂರ್ತಿಯಾಗಿ ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;